ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಹೌದು.

ಆ) ಹಾಗಲವಾಡಿ ಕೆರೆಯು ಕೃಷ್ಣ ಜಲಾನಯನ ಪ್ರದೇಶದಲ್ಲಿದ್ದು, ಹಾಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿರುತ್ತದೆ. ಪ್ರಸ್ತಾಪಿಸಿರುವ ಕಾಮಗಾರಿಯು ಹೇಮಾವತಿ ನಾಲೆಯಿಂದ ನೀರನ್ನು ಹಾಗಲವಾಡಿ ಕೆರೆಗೆ ಹರಿಸುವುದಾಗಿದ್ದು, ಇದು ಅಂತರ್ ಕಣಿವೆ ನೀರು ವರ್ಗಾವಣೆಗೆ ಸಂಬಂಧಿಸಿರುತ್ತದೆ.

ಕಾವೇರಿ ನ್ಯಾಯಾಧಿಕರಣದ ದಿನಾಂಕ: 05.02.2007 ರ ಅಂತಿಮ ತೀರ್ಪಿನಲ್ಲಿ ರಾಜ್ಯದ ಒಟ್ಟಾರೆ ಬೇಡಿಕೆಯಾದ 465 ಟಿ.ಎಂ.ಸಿ.ಗೆ ಎದುರಾಗಿ 270 ಟಿ.ಎಂ.ಸಿ ನೀರನ್ನು ಹಂಚಿಕೆ ಮಾಡಿರುತ್ತದೆ. ಸದರಿ ತೀರ್ಪನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಅನುಮತಿ ಅರ್ಜಿ ದಾಖಲಿಸಿದ್ದು, ತಮಿಳುನಾಡು ಸರ್ಕಾರವು ಸಹಾ ಮಧ್ಯಂತರ ಅರ್ಜಿ ದಾಖಲು ಮಾಡಿದೆ ಹಾಗೂ ಪ್ರಕರಣವು ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇರುತ್ತದೆ. ಈ ಹಿನ್ನೆಲೆಯಲ್ಲಿ ಹೇಮಾವತಿ ನಾಲೆಯಿಂದ ಹಾಗಲುವಾಡಿ ಕೆರೆ ತುಂಬಿಸುವ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

204 ಶ್ರೀ ಜಾರಕಿಹೊಳಿ ಸತೀಶ್ ಲಕ್ಷ್ಮಣರಾವ್ : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ರುಸ್ತುಂಪೂರ ಮತ್ತು ದಡ್ಡಿ ಯಾತ ನೀರಾವರಿ ಯೋಜನೆಯು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು?

ಇ) ಸದರಿ ಯೋಜನೆಯನ್ನು ಯಾವಾಗ ಅನುಷ್ಠಾನ ಗೊಳಿಸುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ದಡ್ಡಿ ನಾಗನೂರ ಏತ ನೀರಾವರಿ ಯೋಜನೆಯ ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬವಾಗಿತ್ತು. ರುಸ್ತುಂಪೂರ ಏತ ನೀರಾವರಿ ಯೋಜನೆಯ 1ನೇ ಮತ್ತು 2ನೇ ಹಂತದ ಕಾಮಗಾರಿಗಳಿಗೆ ಸೆಪ್ಟೆಂಬರ್ 2007 ರ ತಿಂಗಳಿನಲ್ಲಿ ಚಾಲನೆ ನೀಡಲಾಗಿದೆ.

ಆ) ದಡ್ಡಿ ನಾಗನೂರ ಏತ ನೀರಾವರಿ ಯೋಜನೆಯ 1 ನೇ ಹಂತದ ಹಾಗೂ 2ನೇ ಹಂತದ ಪಂಪಿಂಗ್ ಮಶಿನರಿ ಮತ್ತು ರೈಜಿಂಗ್ ಮೇನ್ ಕಾಮಗಾರಿಗಳು ಪೂರ್ಣಗೊಳ್ಳದೇ ಇರುವುದು ಹಾಗೂ ಹುಕ್ಕೇರಿ ಸಬ್‌ಸ್ಟೇಶನ್ನಿನಿಂದ ಏತ ನೀರಾವರಿ ಯೋಜನೆ ಸ್ಥಳಕ್ಕೆ ಸಂಪರ್ಕಿಸುವ 33 ಕೆ.ವಿ. ವಿದ್ಯುತ್ ಮಾರ್ಗವು ಚಾಲನೆಗೆ ಬರದಿರುವುದು, ಯೋಜನೆಯ ವಿಳಂಬಕ್ಕೆ ಕಾರಣವಾಗಿದೆ.

ಕರ್ನಾಟಕ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿ 87 ನೇ ಸಭೆಯ ಶಿಫಾರಸ್ಸಿನಂತೆ, ನಿಗಮದ ಆಡಳಿತ ಮಂಡಳಿಯ 43ನೇ ಸಭೆಯಲ್ಲಿ ದಡ್ಡಿ ನಾಗನೂರ ಏತ ನೀರಾವರಿ ಯೋಜನೆಯ ಪಂಪಿಂಗ್ ಮಶಿನರಿ ಮತ್ತು ರೈಜಿಂಗ್‌ಮೇನ್ ಕಾಮಗಾರಿಯನ್ನು ಯಥಾಸ್ಥಿತಿಯಲ್ಲಿ ಮೊಟಕುಗೊಳಿಸಿ, ಟೆಂಡರ್ ಕರೆದು ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಿ, ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿರುತ್ತಾರೆ. ಇದರನ್ವಯ ಬಾಕಿ ಉಳಿದ ಕಾಮಗಾರಿಯನ್ನು ಮೆ: ಗಿರಿ ಇಂಜಿನಿಯರಿಂಗ್ ಬೆಂಗಳೂರು ಇವರಿಗೆ ಟೆಂಡರ್ ಮುಖಾಂತರ ವಹಿಸಲಾಗಿದೆ. ಗುತ್ತಿಗೆದಾರರು ಕಾಮಗಾರಿಯನ್ನು ಪ್ರಗತಿಯಲ್ಲಿಟ್ಟಿದ್ದು, ರೂ.8.65 ಲಕ್ಷಗಳ ಪ್ರಗತಿ ನೀಡಿರುತ್ತಾರೆ.

ಇ) ದಡ್ಡಿ ನಾಗನೂರ ಏತ ನೀರಾವರಿ ಯೋಜನೆಯ 1 ನೇ ಹಂತದ ಪಂಪಿಂಗ್ ಮಶಿನರಿ ಮತ್ತು ರೈಜಿಂಗ್ ಮೇನ್ ಕಾಮಗಾರಿಯ ಬಾಕಿ ಉಳಿದ ಕೆಲಸಗಳು ಪ್ರಗತಿಯಲ್ಲಿದ್ದು, ಈ ಯೋಜನೆಯನ್ನು ಮಾರ್ಚ್ 2010 ರ ಅಂತ್ಯದ ಒಳಗಾಗಿ ಚಾಲನೆಗೊಳಿಸಲಾಗುವುದು.